1719

ನೋಟಿಫಿಕೇರ್ಷ, ತಾರೀಖು 5ನೆ ನವಂಬರ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಈ ಕೆಳಗಿನ ತಖ್ತೆಯಲ್ಲಿ ಕಂಡ ಕಡೂರು ಡಿಸ್ಟ್ರಿಕ್ಟಿನ ಡಿಪೋ ಗಳಲ್ಲಿ ಆಯಾಯ ಡಿಪೋಗಳ ಬಾಜ್ಯಾರಲ್ಲಿ ನಮೂದಿಸಿರುವ ನಾಟುಗಳನ್ನು ಆಯಾಯ ತಾರೀಖುಗಳಲ್ಲಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರವರಿಂದ ಹರಾಜು ಕೂಗಿಸಲ್ಪಡುತ್ತೆ:—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ನಾಟುಗಳ ಜಾತಿ.	ಸಲೆ ಅಡಿ.		ಪರಾ.
				ಅದದು.	ಅಡಿ.	
1	ತರೀಕೆರೆ ...	28—11—1904	ಸಾಗುವಾನಿ ನಾಟಾ ...	200	6,000	ಕಡೂರು ಡಿಸ್ಟ್ರಿಕ್ಟು.
			ಸಾಗುವಾನಿ ಜಲಗು ...	603	1,385	
			ನಂದಿ ನಾಟ ...	46	14,37	
			ಮುತ್ತಿ ನಾಟ ...	150	3,200	
			ಯುತ್ಯೋಗ ನಾಟ ...	30	906	
2	ಬಂಕೀಪುರ ...	29—11—1904	ಸಾಗುವಾನಿ ನಾಟ ...	40	1,000	
			ಮುತ್ತಿ ನಾಟ ...	44	1,200	
			ನಂದಿ ನಾಟ ...	32	930	

ಹರಾಜು ಷರತ್ತು:—1895ನೆ ಇಸವಿ ಏಪ್ರೆಲ್ 25ನೆ ವರ್ಷಂ 15ನೆ ನಂಬರ ಗೆಜೆಟ್ಟಿನಲ್ಲಿ ಫಾಯಿಷ್ ಆಗಿರುವ 1895ನೆ ಇಸವಿ ಮಾರ್ಚ್ 10ನೆ ವರ್ಷಂ ನಂಬರ 1529 R. F. 155—92ನೆ ಇಸ್ತಿಹಾರ್ನಂತೆ ನಡದುಕೊಳ್ಳಬೇಕು.

ಎಂ. ಜಿ. ರಾಮರಾವ್,
ಡಿಸ್ಟ್ರಿಕ್ಟು ಫಾರೆಸ್ಟ್ ಆಫೀಸರ್, ಕಡೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ಸ್ಯ 1904ನೆ ಇಸವಿ ಸೆಪ್ಟಂಬರು ತಾರೀಖು 17ರಲ್ಲು ನಡದ ಕೋಲಾರ ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನಲ್ಲಿ ಆದ ತೀರ್ಮಾನಗಳು.

ಹಾಜರು.

ಎಕ್ಸ್ ಅಫೀಷಿಯೋ ಮೆಂಬರುಗಳು.

1. ಮಾ॥ ಶ್ರೀ॥ ಕೆ. ಪಿ. ಪುಟ್ಟಣ್ಣ ಕೆಟ್ಟರವರು, ಪ್ರೆಸಿಡೆಂಟ್.
2. ,, ಸಿ. ರಾಮರಾಯರವರು, ಚಿಕ್ಕಬಳ್ಳಾಪುರ ಡಿವೀರ್ಜ ಅಸಿಸ್ಟೆಂಟ್ ಕಮಿಷನರ್.
3. ,, ತ್ಯಾಗರಾಜಯ್ಯನವರು, ಮಾಲೂರು ಡಿವೀರ್ಜ ಅ॥ ಕ॥ ರವರು.
4. ,, ಬಿ. ಸುಬ್ಬರಾಯರವರು, ಎಕ್ಸಿಕ್ಯೂಟಿವ್ ಇಂಜನೀಯರ್.
5. ,, ಪೊನ್ನಸಾಮಿ ಪಿಳ್ಳೆಯವರು, ಡಿ॥ ಮೆಡಿಕಲ್ ಆಫೀಸರ್.
6. ,, ರಂಗಾಚಾರ್ರವರು, ಸ್ಕೂಲ್‌ಗಳ ಡಿ॥ ಇನ್ಸ್‌ಪೆಕ್ಟರವರು.
7. ,, ಗುರುರಾಯರವರು, ಡಿ॥ ಟ್ರೆಜರಿ ಇನ್‌ಚಾರ್ಜ್ ಆಫೀಸರ್ ವೈಸ್ ಪ್ರೆಸಿಡೆಂಟ್.

ನಾ॥ ಅಫೀಷಿಯಲ್ ಮೆಂಬರುಗಳು.

ಕ್ಷಾತ್ರರು (ಡಿ).

1. ಮಾ॥ ಶ್ರೀ॥ ಮುನಿನಾರಣಯ್ಯ ಕೆಟ್ಟರವರು, ಕೋಲಾರ.
2. ,, ಉಮ್ಮಣ್ಣಯ್ಯನವರು, ಬವರಿಂಗ್‌ಪೇಟೆ.
3. ,, ರಾಮರಾಯರವರು, ಮಾಲೂರು.
4. ,, ಚಿನ್ನಪ್ಪನವರು, ಶ್ರೀನಿವಾಸಪುರ.
5. ,, ದೊರೆ ಚಿಕ್ಕಸುಬ್ರಾಯಪ್ಪನವರು, ಶಿಡ್ಲಘಟ್ಟ.
6. ,, ನಾರಾಯಣಸಾಮಿಸೆಟ್ಟರವರು, ಚಿಕ್ಕಬಳ್ಳಾಪುರ.
7. ,, ಕಾಷಿ ಹೈದರ್‌ಸಾಬರು, ಮುಳಬಾಗಲ್.
8. ,, ಅಪ್ಪಾಜಿರಡ್ಡಿಯವರು, ಚಿಂತಾಮಣಿ.

9. ಮಾ" ಶ್ರೀ|| ವೆಂಗಟಪ್ಪನವರು, ಬಾಗೇಪಲ್ಲಿ.
10. ,, ರಾಮಣ್ಣನವರು, ಗೋರಿಬಿದನೂರ್.
11. ,, ಲಕ್ಷ್ಮಣರಾಯರವರು, ಗುಡಿಬಂಡೆ.

ಕ್ಲಾಜ (ಇ).

12. ,, ಬಸವೇಗೌಡರು, ಬವರಿಂಗಪೇಟೆ.
13 ,, ವೆಂಗಟಕಾಮಿರಡ್ಡಿಯವರು, ಶ್ರೀನಿವಾಸಪುರ.
14. ,, ಶ್ರೀನಿವಾಸಾಚಾರ್ಯರವರು, ಶಿಡ್ಲಘಟ್ಟ
15. ,, ವೆಂಗಟರಡ್ಡಿಯವರು, ಬಾಗೇಪಲ್ಲಿ.
16. ,, ಸೂರನಾರಣಪ್ಪನವರು, ಚಿಂತಾಮಣಿ
17. ,, ಗೌಡಗೆರೆ ಕ್ರಿಷ್ಟ್ಯಾಚಾರ್ಯರು, ಗೋರಿಬಿದನೂರು

ಗೈರ್ ಹಾಜರು.

ಎಕ್ಸ್ ಆಫಿಷಿಯೋ ಮೆಂಬರು.

1. ಮಾ|| ಶ್ರೀ ಕೆ. ಆರ್ ಶ್ರೀನಿವಾಸಯ್ಯಂಗಾರ್ಯವರು, ಚಿಂತಾಮಣಿ ಡಿ" ಅ" ಕ್ಷ|| ರವರು.

1. 1904ನೆ ಇಸವಿ ಜೂನ್ ಮಾಹೆ 3ನೆ ತಾರೀಖಿನಲ್ಲಿ ನಡದ ಮಿಟಿಂಗ್ ಪ್ರೊಸಿಡಿಂಗ್ಸ್ ಓದಲಾಯಿತು. ಖಾಯಂ ಮಾಡಲ್ಪಟ್ಟಿತು.

2. ಕಂಟ್ರೋಲರ ಆಫೀಸಿನಿಂದ ಅಡ್ವಸ್ಟು ಆಗಿ ಬಂದ ಜೂನ್ ಮಾಹೆ ಜಮಾ ಖರ್ಚು ಓದಲಾಯಿತು. ರಿಕಾರ್ಡು ಮಾಡಲ್ಪಟ್ಟಿತು.

3. ಸೆಕ್ರಿಟೇರಿ ಸಾಹೇಬರವರ 27—7—1904ನೆ ನಮ್ಬರ್ಕಂ C. 79—33-L. F. ನೆ ನಂಬರು ಡಾಕೆಟ್ಟು ಮೂಲಕ ರು ತಾಲ್ಲೂಕು ಮಾಸ್ತಿ ನರಸಾಪುರ ಮತ್ತು ಲಕ್ಕೂರು ಗ್ರಾಮಗಳಲ್ಲಿ ಯೂನಿಯರ್ಗಳು ಏರ್ಪಾಟಾಗುವ ವಿಷಯದಲ್ಲಿ ಬಂದದ್ದು ಓದಲಾಯಿತು.

ತಾಲ್ಲೂಕು ಬೋರ್ಡಿನವರು ಸಿಫಾರ್ಸು ಮಾಡಿದ ಪ್ರಕಾರ ಮೇಲ್ಕಂಡ ಗ್ರಾಮಗಳಲ್ಲಿ ಯೂನಿಯರ್ಗಳು ಏರ್ಪಾಟಾಗಲು ಡಿ|| ಬೋರ್ಡಿನವರು ಒಪ್ಪಿರುತ್ತಾರೆ.

4. ಶೀತಮಂಗಲದ 3ನೆ ಕ್ಲಾಸು ಡುಸಾಫರ್ ಬಂಗ್ಲೆಗೆ ಬಬ್ಬು ಕೊತ್ವಾಲ್ ಇಸಂ ನೇಮಿಸುವ ವಿಷಯದಲ್ಲಿ ಬೋರ್ಡಿನವರು ಪುನಃ ಆಲೋಚನೆ ಮಾಡಬೇಕೆಂದು ಬಂದ 22—7—1904ನೆ ನಮ್ಬರ್ಕಂ 562—L. B. ನೆ ನಂಬರ್ ಪ್ರೊಸಿಡಿಂಗ್ಸು ಓದಲಾಯಿತು.

ಹುಟ್ಟುವಳಿ ಬಹಳ ಕಮ್ಮಿಯಾಗಿರುವದ್ದರಿಂದ ಈಗ ಸದ್ಯಕ್ಕೆ ಇದನ್ನು ಮುನ್ನಾ ಮಾಡಬೇಕೆಂದು ತೀರ್ಮಾನವಾಯಿತು.

5. ಡಿ|| ಫಂಡು ರೋಡುಗಳು ಹೋಗುವ ಕೆರೆಕಟ್ಟೆಗಳ ಮೇಲೆ ಮೆಟ್ಲಿಂಗು ಹಾಕುವ ವಿಷಯದಲ್ಲಿ ಬೋರ್ಡಿನ ತೀರ್ಮಾನವನ್ನು ಕಳುಹಿಸಿಕೊಡಬೇಕೆಂದು ಗೌರ್ನಮೆಂಟಿನಿಂದ ಬಂದ 19—7—04ನೆ ನಮ್ಬರ್ಕಂ 475-65—L. B. Cir. ನೆ ನಂಬರು ಪ್ರೊಸಿಡಿಂಗ್ಸು ಓದಲಾಯಿತು.

ಇಂಥಾ ರಸ್ತೆಗಳಿಗೆ ಮೆಟ್ಲಿಂಗು ಹಾಕಿಸುವದು ಅವಶ್ಯಕ ತೋರಿದ ಪಕ್ಷದಲ್ಲಿ ಬೋರ್ಡಿನವರು ಹಣ ಕೊಡುವ ವಿಷಯದಲ್ಲಿ ಯೋಚನೆ ಮಾಡುತ್ತಾರೆ.

ಎಕ್ಸಿಕ್ಯೂಟಿವ್ ಇಂಜನೀಯರು ಸಾಹೇಬರವರು ಇಂಥಾ ಸಂದರ್ಭಗಳು ಏನಾದರೂ ಇರುವ ಪಕ್ಷದಲ್ಲಿ ಅದನ್ನು ಬೋರ್ಡಿನವರ ನೋಟೀಸಿಗೆ ತರಬೇಕೆಂದು ಕೇಳಲ್ಪಟ್ಟಿದೆ.

6. ಗ್ರಾಮಾಂತ್ರಗಳಲ್ಲಿ ಪಟೇಲ ಕ್ಯಾನುಭೋಗರ ಮೂಲಕ ಕ್ವಿನೈನ್ ಬಿಕರಿ ಮಾಡಿಸುವ ವಿಷಯದಲ್ಲಿ ಗೌರ್ನಮೆಂಟಿನಿಂದ ತಲಪಿದ 3—8—04ನೆ ನಮ್ಬರ್ಕಂ ೫೪೭—Mdl. 9—03ನೆ ನಂಬರು ಪ್ರೊಸಿಡಿಂಗ್ಸು ಓದಲಾಯಿತು.

ರಿಕಾರ್ಡು ಮಾಡಲ್ಪಟ್ಟಿತು.

ಬೋರ್ಡಿನವರು ಗ್ರಾಮಾಂತರಗಳಲ್ಲಿ ಪಟೇಲ ಕ್ಯಾನುಭೋಗರುಗಳ ಮೂಲಕ ಕ್ವಿನೈನ್ ಬಿಕರಿ ಮಾಡುವದ್ದರಿಂದ ಒಳ್ಳೇ ಫಲಿತಾಂಶಗಳನ್ನು ಎದರು ನೋಡುತ್ತಾರೆ.

7. ಆಸ್ಪತ್ರೆ ಖರ್ಚುಗಳಿಗಾಗಿ ಮುನಿಸಿಪಲ್ ಮತ್ತು ಡಿ ಫಂಡ್ ಬಜೆಟ್ಟಿನಲ್ಲಿ ದಾಖಲಾಗಿರುವ ಮೊಬಲಗುಗಳನ್ನು ಸ್ಪೇಷಲ್ ಮೆಡಿಕಲ್ ಬಜೆಟ್ಟಿಗೆ ಕಂಟ್ರಿಬ್ಯೂಷನ್ ಆಗಿ ಸಿಲ್ಲಿಸಬೇಕು ಮತ್ತು 1904—05ನೆ ಸಾಲಿನಿಂದ ಚೀಫ್ ಇಂಜನೀಯರ್ ಸಾಹೇಬರವರು ಆಸ್ಪತ್ರೆ ಕಟ್ಟಡಗಳ ರಿಪೇರಿಗಳಿಗಾಗಿ ಜೇಕಾಗಿರುವ ಮುನಿಸಿಪಲ್ ಮತ್ತು ಡಿ|| ಫಂಡು ಬಾಬತು ಮೊಬಲಗು ಪಾವತಿಗೋಸ್ಕರ ಸೀನಿಯರ್ ಸರ್ಜ್ಜನ್ ಸಾಹೇಬರವರಿಗೆ ಬರದು ಕೇಳಬೇಕೆಂದುನ್ನು ತಲಪಿರುವ 9—7—904ನೆ ನಮ್ಬರ್ಕಂನ 165—76—17-9 L. B. ನೆ ನಂಬರು ಗೌರ್ನಮೆಂಟ್ ಪ್ರೊಸಿಡಿಂಗ್ಸು ಓದಲಾಯಿತು.

ರಿಕಾರ್ಡ್ ಮಾಡಲ್ಪಟ್ಟಿತು.

1721

8. ಬಾಗೇಪಲ್ಲಿ, ಕೋಲಾರ, ಕಿಚ್ಚಳ್ಳಿಪಟ್ಟು ಆಸ್ಪತ್ರೆಗಳ ಕಾಂಪೌಂಡುಗಳು ಹಾಕುವ ವಿಷಯದಲ್ಲಿ ಸೀನಿಯರ್ ಸರ್ಜ್ಯರವರಿಂದ ತಲುಪಿದ 5405—311—962ನೆ ನಂಬರುಗಳ ಮಿವೋಗಳು ಓದಲಾಯಿತು.

ಸೀನಿಯರ್ ಸರ್ಜ್ಯ ಸಾಹೇಬರವರು ಡಿಸ್ಟ್ರಿಕ್ಟ್ ಫಂಡ್ ಬಜ್ಜಟ್ಟಿನಲ್ಲಿ c IX ಕಂಟ್ರಿಬ್ಯೂಷ್ಯ ಎಂಬ ಹೆಡ್ಡಿನಲ್ಲಿ ಆಸ್ಪತ್ರೆಗಳ ರಿಪೇರಿಗಳಿಗಾಗಿ ನಮೂದಾಗಿರುವ ಮೊಬಲಗ್ಯೆ ಗಮನ ಕೊಡಬೇಕೆಂದುನ್ನು ಈ ವರುಷ ಈ ಮೊಬಲಗನ್ನು ಬೋರ್ಡಿನವರು ಹೆಚ್ಚಿಸುವದಕ್ಕೆ ಅಶಕ್ತರೆಂದುನ್ನು ತೀರ್ಮಾನ ಮಾಡಲ್ಪಟ್ಟಿತು.

9. ಮುಸಾಫರ ಬಂಗ್ಲೆಗಳಿಗೋಸ್ಕರ ಹೊಸ ಸಾಮಾನುಗಳು ಕೊಂಡುಕೊಳ್ಳಲು ಮತ್ತು ಹಳೇ ಸಾಮಾನುಗಳನ್ನು ರಿಪೇರಿ ಮಾಡಿಸಲು 100 ರೂಪಾಯಿಗಳ ಬಳಗಾಗಿರುವ ಅಂದಾಜುಗಳನ್ನು ಮಂಜೂರು ಮಾಡಲು ಡಿಪ್ಯುಟಿ ಕಮಿಷ್ನರುಗಳಿಗೆ ಅಧಿಕಾರ ಕೊಟ್ಟಿರುತ್ತೆಂದು 7—7—904ನೆ ಮಕ್ಕಂ 156-65—G. F. 15-96ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸು ಓದಲಾಯಿತು.

ರಿಕಾರ್ಡು ಮಾಡಲ್ಪಟ್ಟಿತು.

10. ಪ್ರೆಸಿಡೆಂಟರವರಿಂದ 500 ರೂಪಾಯಿಗಳ ಬಳಗಾಗಿ ಮಂಜೂರು ಮಾಡಲ್ಪಟ್ಟ ಕಾವಲುಗಾರಿಗಳ ಲೀಪ್ಟು 1904ನೆ ಇಸವಿ ಜೂ, ಜುಲೈ, ಆಗಸ್ಟ್ ಮಾಹೆಗಳ ಬಾಬತು ಬೋರ್ಡಿನಲ್ಲಿ ಖರ್ಚು ಮಾಡಿ ಕಳುಹಿಸಬೇಕೆಂದು ಸೆಕ್ರಟೇರಿ ಸಾಹೇಬರವರಿಂದ ಬಂದ 27—8—904ನೆ ಮಕ್ಕಂ 1691 - 93-2—L. B. ನೆ ನಂಬರು ಡಾಕೆಟ್ಟು ಓದಲಾಯಿತು.

11. 1904—905ನೆ ಇಸವಿ ಕೋಲಾರದ ಡಿ|| ಬೋರ್ಡಿನ ಡಿ|| ಫಂಡು ಬಜ್ಜಟ್ಟು ಮಂಜೂರಾಗಿ ಬಂದ ಗೌರ್ನಮೆಂಟು ಪ್ರೊಸೀಡಿಂಗ್ಸು ಓದಿ ರಿಕಾರ್ಡು ಮಾಡಲಾಯಿತು.

12. 1903—904ನೆ ಇಸವಿ ಸಾಲ್ ಆಬೈರಿನಲ್ಲಿ ನಿಮಿಕಲ್ ಬಂದ ಕಾವಲುಗಾರಿಗಳ ಲೀಸ್ಟು ಓದಲಾಯಿತು. ಈ ಲೀಸ್ಟುಗಳನ್ನು ಗೌರ್ನಮೆಂಟಿಗೆ ಕಳುಹಿಸಿ ಅದಕ್ಕೆ ಬೇಕಾದ ಮೊಬಲಗು ಕೇಳಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

13. 1903 - 904ನೆ ಸಾಲಿನ ಡ್ರಾಪ್ಟು ಡಿ|| ಫಂಡು ಅಡಿಮಿನಿಸ್ಟ್ರೇಷ್ಯ ರಿಪೋರ್ಟು ಓದಲಾಯಿತು.

ಇದಕ್ಕೆ ಬೋರ್ಡಿನವರು ಬಿಪ್ಪಿ ಇದರ ನಕಲನ್ನು ಗೌರ್ನಮೆಂಟಿಗೆ ಕಳುಹಿಸಬೇಕೆಂತ ತೀರ್ಮಾನ ಮಾಡಿದರು.

14. ಬರುವ ಡಿಸೆಂಬರು ಮಾಹೆ 19ನೆ ತಾ|| ಸೋಮವಾರ ತಿರಿಗಿ ಮಿಟಿಂಗ್ ಕೋಲಾರದಲ್ಲಿ ನಡಿಯಬೇಕೆಂದು ತೀರ್ಮಾನವಾಯಿತು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಪ್ರೆಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಬುದಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ವಾಗಿ ತಿರುಮಕೂಡ್ಲು ನರಸೀಪುರ ತಾಲ್ಲೂಕು ಜೋಡಿ ಬುದಹಳ್ಳಿ ಗ್ರಾಮದಲ್ಲಿ 1904ನೆ ಇಸವಿ ನವಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 27ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 591ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 7ನೆ ಅಕ್ಟೋಬರ್ 1904.

ತಿ. ನರಸೀಪುರ ತಾಲ್ಲೂಕಿಗೆ ಸೇರಿದ ಸರ್ವಮಾನ್ಯ ಮಡವಾಡಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗಾಗಿ, ತಿ. ನರಸೀಪುರ ತಾಲ್ಲೂಕು ಸದರಿ ಮಡವಾಡಿ ಗ್ರಾಮದಲ್ಲಿ 1904ನೆ ಇಸವಿ ನವಂಬರ್ ಮಾಹೆ 16ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 27ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 592ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 13ನೆ ಅಕ್ಟೋಬರ್ 1904.

ತಿರುಮಕೂಡ್ಲು ನರಸೀಪುರ ತಾಲ್ಲೂಕಿಗೆ ಸೇರಿದ ಜೋಡಿ ಕಲಿಯೂರು ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಟಿ. ನರಸೀಪುರ ತಾಲ್ಲೂಕು ಜೋಡಿ ಕಲಿಯೂರು ಗ್ರಾಮದಲ್ಲಿ 1904ನೆ ನವಂಬರ್ ಮಾಹೆ 14ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಯೆ 1904ನೆ ಅಕ್ಟೋಬರ್ 13ನೆ ಮಕ್ಕಂ 42ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 590ನೆ ನಂಬರು ಪೇಜು ನೋಡತಕ್ಕದ್ದು.